9) ಯಾವುದೇ ಪ್ರಕಾಶನ ಸಂಸ್ಥೆ ಲೇಖಕ ಪ್ರಕಾಶಕರು, ಲೇಖಕರು ಇವರಿಂದ ಒಂದು ವರ್ಷದಲ್ಲಿ ರೂ 35,000,00 ಮೀರದ ಬೆಲೆಯಲ್ಲಿ ಖರೀದಿಸಬಾರದು

10) ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು ಮಾತ್ರ ಖರೀದಿಸಬೇಕು ಆಯ್ಕೆಯಾದ ಪುಸ್ತಕಗಳನ್ನು ಆಯಾಯಾ ಆರ್ಥಿಕ ವರ್ಷ ಹಾಗೂ ಅದರ ಮುಂದಿನ ವರ್ಷ ಮಾತ್ರ ಖರೀದಿಸಬಹುದು

11) ಆಯ್ಕೆ ಸಮಿತಿಯ ಸ್ಪಷ್ಟ ಅನುಮೋದನೆಯ ನಂತರವೇ ಖರೀದಿಸತಕ್ಕದ್ದು ಯಾವುದೇ ಸಂದರ್ಭದಲ್ಲಿ ಖರೀದಿಸಿ ಘಟನೋತ್ತರ ಅವಧಿ ಕೋರಬಾರದು

ಡೆಂಗೆ ಜ್ವರ ಪ್ರಕರಣಗಳು

155 (222) ಶ್ರೀ ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಡೆಂಗೆ ಜ್ವರಕ್ಕೆ ಸಂಬಂಧಿಸಿದಂತೆ, ರಾಷ್ಟ್ರ ಅಥವಾ ರಾಜ್ಯ ಮಟ್ಟದಲ್ಲಿ ಯಾವುದಾದರೂ ನೀತಿ ಪ್ರಕಟಗೊಂಡಿದೆಯೇ

ಆ) ರಾಜ್ಯದಲ್ಲಿ ಈ ಡೆಂಗೆ ಜ್ವರ ಕಾಣಿಸಿಕೊಂಡು ಎಷ್ಟು ಪ್ರಕರಣಗಳು ಪತ್ತೆಯಾಗಿವೆ? (ಜಿಲ್ಲಾವಾರು ವಿವರ ಒದಗಿಸುವುದು)

ಇ) ಡೆಂಗೆಜ್ವರ ಹರಡಲು ಕಾರಣವೇನು? ಈ ರೋಗದ ಸ್ವರೂಪ ಎಂತಹುದು ಇದರ ನಿಯಂತ್ರಣಕ್ಕೆ ಯಾವ ಕಾರ್ಯಕ್ರಮ ರೂಪಿಸಲಾಗಿದೆ,

ಈ) ಡೆಂಗೆ ಜ್ವರದಿಂದ ಇದುವರೆಗೆ ರಾಜ್ಯದಲ್ಲಿ ಬಲಿಯಾದವರು ಸಂಖ್ಯೆ ಎಷ್ಟು ಡೆಂಗೆ ಜ್ವರದ ಪತ್ತೆಯನ್ನು ಹೇಗೆ ಮಾಡಲಾಗುತ್ತದೆ

ಉ) ಇದನ್ನು ಶಾಶ್ವತವಾಗಿ ತಡೆಯಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ರಾಜ್ಯದಲ್ಲಿ 2003ನೇ ಸಾಲಿನಲ್ಲಿ ವರದಿಯಾದ ಡೆಂಗಿ ಪ್ರಕರಣಗಳ ಜಿಲ್ಲಾವಾರು ವಿವರ ಹೀಗಿದೆ

ಜಿಲ್ಲೆ	ಡೆಂಗಿ ಪ್ರಕರಣಗಳು	ಜಿಲ್ಲೆ	ಡೆಂಗಿ ಪ್ರಕರಣಗಳು
ಬೆಂಗಳೂರು ನಗರ ಜಿಲ್ಲೆ	66	ದಾರವಾಡ	14
ಬೆಂಗಳೂರು ಮಹಾನಗರ ಪಾಲಿಕೆ	381	ಉತ್ತರ ಕನ್ನಡ	1
ಬೆಂಗಳೂರು (ಗ್ರಾ)	86	ಗುಲ್ಬರ್ಗ	1
ಕೋಲಾರ	203	ಬಳ್ಳಾರಿ	13
ತುಮಕೂರು	68	ರಾಯಚೂರ್	6
ಚಿತ್ರದುರ್ಗ	8	ಮೈಸೂರು	58
ದಾವಣಗೆರೆ	18	ಚಾಮರಾಜನಗರ	19

1	2	1	2
ಶಿವಮೊಗ್ಗ	17	ಮಂಡ್ಯ	136
ಬೆಳಗಾಂ	5	ಹಾಸನ	3
ಬಿಜಾಪುರ	4	ದಕ್ಷಿಣ ಕನ್ನಡ	92
ಬಾಗಲಕೋಟೆ	4	ಚಿಕ್ಕಮಗಳೂರು	3
ಕೊಡಗು	15	ಒಟ್ಟು	1221

ಇ) ಡೆಂಗಿ ವೈರಸ್‌ನಿಂದ ಸೋಂಕು ಹೊಂದಿದ ಈಜಿಪ್ಟ್ಯ ಎಂಬ ಜಾತಿಯ ಸೊಳ್ಳೆಗಳಿಂದ ಈ ಖಾಯಿಲೆಯು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ

ಡೆಂಗಿ ಜ್ವರ ರೋಗಗಳಲ್ಲಿ 3 ಸ್ವರೂಪಗಳಿವೆ

1) ಡೆಂಗಿ ಜ್ವರ 2) ಡೆಂಗಿ ರಕ್ತಸ್ರಾವ ಜ್ವರ ಮತ್ತು 3) ಡೆಂಗಿ ಷಾಕ್ ಸಿಂಡ್ರೋಮ್ ಇದರಲ್ಲಿ ಕೊನೆಯ 2 ಸ್ವರೂಪಗಳು ಮಾರಕವಾಗಿದೆ

2003 ರಲ್ಲಿ ರಾಜ್ಯದಲ್ಲಿ ಡೆಂಗ್ಯು ಜ್ವರ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳು ಕೈಗೊಳ್ಳಲಾಗಿದೆ

1 ಎಲ್ಲಾ ಜಿಲ್ಲೆಗಳಿಗೂ ಮುಂಜಾಗ್ರತಾ ಕ್ರಮವಾಗಿ ಡೆಂಗಿ ಜ್ವರ ತಡೆಗಟ್ಟುವ ನಿಯಂತ್ರಣ ಕ್ರಮಗಳಿಗೆ ಸನ್ನದ್ದರಾಗಿರುವಂತೆ ಮುನ್ಸೂಚನಾ ಸುತ್ತೋಲೆಗಳನ್ನು ಕಳುಹಿಸಿ ಎಚ್ಚರಿಸಲಾಗಿದೆ

2 ಜ್ವರ ಪೀಡಿತರಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ ರಾಷ್ಟ್ರೀಯ ವೈರಾಣು ಸಂಸ್ಥೆ ಬೆಂಗಳೂರು ಇಲ್ಲಿಗೆ ಡೆಂಗಿ ಜ್ವರ ಪತ್ತೆಗಾಗಿ ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗಿದೆ

3 ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆಸ್ಪತ್ರೆಗಳಲ್ಲಿ ಡೆಂಗಿ ಜ್ವರ ಮತ್ತು ಡೆಂಗಿ ರಕ್ತಸ್ರಾವ ಪ್ರಕರಣಗಳಿಗೆ ತುರ್ತಾಗಿ ಬೇಕಾಗುವ ನಿರ್ವಹಣಾ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ

4 ಡೆಂಗಿ ಜ್ವರ ಹೆಚ್ಚಿನ ಸಂಖ್ಯೆಯಲ್ಲಿ ತಲೆದೋರಿದ ಪ್ರದೇಶಗಳಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಿ ಸೂಕ್ತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ

5 ಸಮಸ್ಯಾತ್ಮಕ ಪ್ರದೇಶಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿ ತಾಣಗಳ ಸಮೀಕ್ಷೆಮಾಡಿ ಅವುಗಳ ನಿರ್ಮೂಲನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ

6 ತುರ್ತು ಸಂದರ್ಭದಲ್ಲಿ ಈ ರೋಗ ಹರಡದಂತೆ ನಿಯಂತ್ರಿಸಲು ಕೀಟನಾಶಕ ಧೂಮೀಕರಣವನ್ನು ಕೈಗೊಳ್ಳಲಾಗಿದೆ

7 2003–04ನೇ ಸಾಲಿನಲ್ಲಿ ಡೆಂಗಿ ನಿಯಂತ್ರಣಕ್ಕಾಗಿ ರೂ 75 00 ಲಕ್ಷಗಳ ವಿಶೇಷ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿರುತ್ತದೆ

8 100 ಧೂಮೀಕರಣ ಯಂತ್ರಗಳು, 2200 ಡೆಂಗಿ ತ್ವರಿತ ಪತ್ತೆ ಕಿಟ್ಟುಗಳು ಮತ್ತು 250 ಲೀಟರ್ ಧೂಮೀಕರಣ ಕೀಟನಾಶಕಗಳನ್ನು ಡೆಂಗಿ ಪೀಡಿತ ಜಿಲ್ಲೆಗಳಿಗೆ ನೀಡಲಾಗಿದೆ

9 ಜನರಲ್ಲಿ ಈ ರೋಗ ತಡೆಗಟ್ಟುವ ಬಗ್ಗೆ ತಿಳುವಳಿಕೆ ಮೂಡಿಸಲು ಭಿತ್ತಿಪತ್ರಗಳು ಕಿರುಹೊತ್ತಿಗೆಗಳನ್ನು ಮುದ್ರಿಸಿ ಹಂಚಲಾಗಿರುವುದೇ ಅಲ್ಲದೇ ಆರೋಗ್ಯ ಶಿಕ್ಷಣವನ್ನು ಕೈಗೊಳ್ಳಲಾಗಿದೆ

ಈ) ರಾಜ್ಯದಲ್ಲಿ 2003ನೇ ಸಾಲಿನಲ್ಲಿ ಡೆಂಗಿ ಪ್ರಕರಣಗಳಿಂದ ಇದುವರೆಗೆ ಒಟ್ಟು 7 ಜನರು ಮೃತಪಟ್ಟಿರುತ್ತಾರೆ

ಸಂಶಯಾತ್ಮಕ ಜ್ವರಪೀಡಿತರಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ಬೆಂಗಳೂರಿನ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಪರೀಕ್ಷೆಗಾಗಿ ಕಳುಹಿಸಿಕೊಡಲಾಗುತ್ತಿದೆ

ಅಲ್ಲದೆ, ಡೆಂಗಿ ಪೀಡಿತ ಜಿಲ್ಲೆಗಳ ಜಿಲ್ಲಾ ಸಮೀಕ್ಷಾ ಘಟಕಗಳಿಗೆ, ತ್ವರಿತ ರಕ್ತಮಾದರಿ ಪರೀಕ್ಷೆಗಾಗಿ, ಡೆಂಗಿ ಪರೀಕ್ಷಾ ಕಿಟ್ಟುಗಳನ್ನು ಸರಬರಾಜು ಮಾಡಲಾಗಿದೆ

ಉ) ಈ ರೋಗವು ಹರಡಲು ಮನೆಯ ಒಳಗೆ ಹಾಗೂ ಸುತ್ತ ಮುತ್ತಲ ಪರಿಸರದಲ್ಲಿ ಇರಿಸಿದ ಸಿಮೆಂಟು ತೊಟ್ಟಿ, ಟೈರು, ತೆಂಗಿನ ಚಿಪ್ಪು, ಬಿಸಾಡಿದ ಪ್ಲಾಸ್ಟಿಕ್ ವಸ್ತುಗಳು ಮುಂತಾದ ಸಣ್ಣ ಸಣ್ಣ ನೀರಿನ ಶೇಖರಣೆಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದೇ ಮೂಲ ಕಾರಣವಾಗಿರುತ್ತದೆ ಇಂತಹ ಉತ್ಪತ್ತಿ ತಾಣಗಳನ್ನು ಸಮಯ ಪರಿಸರ ನೈರ್ಮಲ್ಯ ಕಾಪಾಡಿಕೊಳ್ಳಲು ಆರೋಗ್ಯ ಇಲಾಖೆ ಮಾತ್ರವಲ್ಲದೆ, ಸ್ಥಳೀಯ ಸಂಸ್ಥೆಗಳು ಪಂಚಾಯತಿಗಳು ಹಾಗೂ ಸಾರ್ವಜನಿಕರ ಸಹಕಾರ ಮತ್ತು ಸಹಭಾಗಿತ್ವ ಅತ್ಯಾವಶ್ಯಕವಾಗಿರುತ್ತದೆ ಈ ನಿಟ್ಟಿನಲ್ಲಿ ಆರೋಗ್ಯ ತರಬೇತಿ ಮುಂತಾದ ಕಾರ್ಯಕ್ರಮವನ್ನು ಇಲಾಖೆಯು ಹಮ್ಮಿಕೊಂಡು ಶಾಶ್ವತ ಪರಿಹಾರಕ್ಕಾಗಿ ಜನಜಾಗೃತಿಯನ್ನು ಮೂಡಿಸಲಾಗುತ್ತಿದೆ

ನಕಲಿ ವೈದ್ಯಕೀಯ ಬಿಲ್ ಕುರಿತು

156 (223) ಶ್ರೀ ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ನೌಕರರು ತಮ್ಮ ವೈದ್ಯಕೀಯ ಖರ್ಚಿನ ಮರುಪಾವತಿ ಸೌಲಭ್ಯಕ್ಕಾಗಿ ನಕಲಿ ಬಿಲ್ ಸೃಷ್ಟಿಸಿರುವುದು ಬೆಳಕಿಗೆ ಬಂದಿದೆಯೇ

ಆ) ಯಾವ ಜಿಲ್ಲೆಯಲ್ಲಿ ಯಾವ ಯಾವ ಇಲಾಖೆಗಳಲ್ಲಿ ಈ ಅಕ್ರಮ ಆಗಿದೆ, ಇದರ ಮೌಲ್ಯವೆಷ್ಟು

ಇ) ಈ ನಕಲಿ ಬಿಲ್ ಸೃಷ್ಟಿಕರ್ತರುಗಳು ಯಾರು, ಇದರಲ್ಲಿ ಭಾಗಿಯಾಗಿರುವವರು ಪತ್ತೆಯಾಗಿರುವವರೇ

ಈ) ಈ ವಂಚನೆಯಲ್ಲಿ ವೈದ್ಯರು ಪಾಲ್ಗೊಂಡಿರುವರೇ ಅಂತಹವರುಗಳ ವಿರುದ್ಧ ಕೈಗೊಂಡ ಕ್ರಮಗಳೇನು

ಉ) ಸದರಿ ಪ್ರಕರಣವು ಬೆಳಕಿಗೆ ಬಂದಿದ್ದು ಹೇಗೆ, ಈ ಜಾಲ ಯಾವಾಗಿನಿಂದ ಈ ಕೃತ್ಯ ವೆಸಗುತ್ತಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಬಿಜಾಪುರ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಈ ಇಲಾಖೆಯ ನೌಕರರು ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರೋಪದ ಕುರಿತು ತನಿಖೆ ಮಾಡಲಾಗುತ್ತಿದೆ ತನಿಖೆ ಪೂರ್ಣಗೊಂಡ ನಂತರ ಇದರ ಮೌಲ್ಯ ಎಷ್ಟು ಎಂಬುದು ತಿಳಿದು ಬರುತ್ತದೆ